ಸ್ಪರ್ಧೆಗೆ ಬಿದ್ದು ಗಿರಗಿರ ತಿರುಗುತ್ತನಾಂಟ್ಯವಾಡುವ
ಈ ಪುಟ್ಟ ನಟರಾಜರು

ಈ ಬುಗುರಿಕಾಯಿ
ಕಿತ್ತ ಕಡೆ ಜೆನುಗಿ ಅರಿಸಿನ ರಸ
ರಂಗಳಿಸಿ ಅದ ಸುಣ್ಣದ ಜೊತೆ
ಸವರಿದರೆ ನವಿರಾಗಿ
ಕಪೋಲದ ಊತವಿಳಿದು
ಗದ್ದಬಾವು ಮಂಗಮಾಯ

ಒಣಗಿಸಿ ಹೂ ದಳ
ಎಲೆ ಕಾಯಿ ತೊಗಟೆ ಚಕ್ಕೆಗಳ
ಕುಟ್ಟಿ ಪುಡಿ ಮಾಡಿ ರಸಬೆರೆಸಿ ಹಚ್ಚಿದರೆ
ಕಜ್ಜಿ ಕೆರೆತಕ್ಕೆ ಕುರಿತೇಟು ಮದ್ದು
ಗುಳ್ಳೆ ಇಸುಬು ಸೀಳು ಹೆಕ್ಕಳು ಸಮೇತ
ಎಲ್ಲ ಬಗೆ ಚರ್ಮಬೇನೆಯ
ಮುಜುಗರವು ವಿಲೆಯಾಗಿ
ಡರ್ಮಟಾಲಜಿ ತಜ್ಞ
ಅಂಗಡಿ ಮುಚ್ಚಬೇಕು

ಈ ಹೂವರಸಿ ಹೆಣ್ಣಿನ
ಮೈಯ್ಯ ಸೇಗೆಷ್ಟೆಂದರೆ
ಸುಲಭಕ್ಕೆ ಬೆಂಡಾಗಿ ಗೂನು ಬೀಳುವಳಲ್ಲ
ಕಬ್ಬಿಣದ ಗಡುಸಿನೀ ನಾರಿ ಪಳಗಿದರೆ
ನೀವೇನು ಮಾಡೀರಿ ಆದರಂತೆ
ಒದಗುವ ಗೋಮೇದಿಕ ರತ್ನ
ತೊಗಟೆಯೆಳೆಗಳ ಹೊಸೆದು ಹುರಿ
ಮಾಡಿದರೆ ಕಟ್ಟಬಹುದು ಮದಕರಿಯ ಸೈತ
ಒಳಮೈಯ ಎಳೆ ನೋಡಿದರೆ
ಬಡಗಿ ಬಾಯ್ನೀರು ಸುರಿಸಬೇಕು
ಹಾಗೆ ಒಗ್ಗುವಳು ನೇಗಿಲಿಗೆ
ಮೇಟಿಗೆ ಗಾಡಿ ಚಕ್ರಕ್ಕೆ
ಚಕ್ರಪಟ್ಟಿಗೆ ಮೇಜು ಕುರ್ಚಿಗೆ
ಮಂಚಕ್ಕೆ ಬೆಂಚಿಗೆ ತೇಲುದೋಣಿಗೆ
ನಿಮ್ಮ ಕರ ಕುಶಲತೆಯ
ಸಕಲ ಸಂಚಿಗೆ



ಬೀಜಗಳೂ
ಬಿಸಾಡಿ ಮರೆಯುವಂತಹುವಲ್ಲ
ಗಪ್ಪಗೆ ಕುಂತ ಎಣ್ಣೆ ಬೊಟ್ಟುಗಳು
ಹಿಂಡಿ ತೆಗೆದರೆ ಇರುಳ ದೀಪಕ್ಕೆ ತೈಲ
ಬಿತ್ತಿದರೆ ಮತ್ತೊಬ್ಬ ಹೂವರಸಿ ಎತ್ತಿ
ಬರುವಳು ಭೂ ಲೋಕದಲಿ ವೃಕ್ಷಜನ್ಮ

ಹುವ್ವದಳ
ಕಾಯಿ ಬೀಜ ತೊಗಟೆ ಸಕಲವನು ಅರೆದು
ಹಿಂಡಿ ತೆಗೆದ ರಸದಲ್ಲದ್ದಿದರೆ ನಿಮ್ಮ ಪತ್ತಲವ
ಅದು ಮಂದ ಹಳದಿ ಬಣ್ಣ ಮೈದಳೆದು
ಹೊಸ ಹೆಣ್ಣು ಮಂಟಪಕೆ ಬಂದಂತೆ
ನೀವು ಹೋದರೂ ಹೋಗದು ವಸ್ತ್ರದ ಬಣ್ಣ
ಇಗೋ ಈ ನಾಲಿಗೆಯೇ ಗ್ಯಾರಂಟಿ
ದೇಸೀ ಬಣ್ಣದಂಗಡಿ ತೆಗೆಯಿರಿ
ಅಂಜದಳುಕದೆ ಪೇಟೆ ಬೀದಿಯಲಿ

ಇಂಥ
ಸರ್ವಾಂಗ ಸುಂದರಿ
ಮಹಾಜನೋಪಕಾರಿ ಹೂವರಸಿ
ಪೂಜೆಗೆ ಮಾತ್ರ ಸಲ್ಲಳೆಂದರೆ
ಉತ್ತರ ಹೇಳಬೇಕಾದವಳು
ಆ ಕೋಟೆ ಮಾರಮ್ಮ ಮಾತ್ರ

ಹೇಳು ತಾಯೀ
ಏನು ಆ ನಿನ್ನ ಮಡಿಯ
ಮಹಾ ವ್ಯಾಖ್ಯಾನ?
...